**ದಿ: 04-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಎ ಟಿ ಬಿ ವಕೀಲರಿಂದ:**

1. ದಾವಾ ಮನೆಯನ್ನು ನಿಮ್ಮ ತಾಯಿಯ ತಂದೆಯವರಾದ ಮಹ್ಮದ ಕಾಸಿಂ ತಂದೆ ಕಾಬೂಲ್ ಹುಸೇನ್ ಇವರು ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಒಟ್ಟು ವಿಸ್ತೀರ್ಣ 30 X 53 ಪೈಕಿ 12 X 9 ಮೀಟರ್ ದಕ್ಷಿಣ ಭಾಗದ್ದು ತನ್ನ ಮಗಳಾದ ಸಾಬೀರಾಬೇಗಂ ಇವರಿಗೆ ಮೌಖಿಕ ದಾನವನ್ನು ಇಬ್ಬರು ಸಾಕ್ಷಿದಾರರಾದ ಜಹಿರುದ್ದೀನ್ ತಂದೆ ಖಾಸಿಂಸಾಬ ಮತ್ತು ಹಲೀಂಪಾಶಾ ತಂದೆ ಶೇಖ್ ಹುಸೇನಸಾಬ ಇವರ ಸಮ್ಮುಖದಲ್ಲಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಮೌಖಿಕ ದಾನ ಮಾಡಿದ ಆಸ್ತಿಯನ್ನು ನಿಮ್ಮ ತಾಯಿಯವರು ಸಂತೋಷಪೂರ್ವಕವಾಗಿ ಸ್ವೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನದಿಂದ ಇವತ್ತಿನವರೆಗೂ ಆ ಆಸ್ತಿಯಲ್ಲಿ ಅವರು ಕಬ್ಜಾದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ನಿಮ್ಮ ತಾಯಿಯವರ ಸಮ್ಮತಿಯನ್ನು ಪಡೆದುಕೊಂಡು ನಿಮ್ಮ ತಂದೆ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ದಿನಾಂಕ: 02-09-2006 ರಂದು ನಿಮ್ಮ ತಂದೆ ಖಾಸಿಂಸಾಬ ಇವರು ತೀರಿಕೊಂಡಿರುತ್ತಾರೆ ಎಂದರೆ ಸರಿ. 2004 ನೇ ಸಾಲಿನಲ್ಲಿ ದಾವಾ ಮನೆಯಲ್ಲಿ ಉಳದಿ ಉತ್ತರ ಭಾಗದ ಆಸ್ತಿಯನ್ನು ಸಾಕ್ಷಿದಾರರ ಸಮ್ಮುಖದಲ್ಲಿ ಮೌಖಿಕ ದಾನವನ್ನು ನಿಮ್ಮ ತಂದೆಯವರಿಗೆ ಕೊಟ್ಟಿದ್ದು ಆ ಪ್ರಕಾರ ಅವರು ಮುಟೇಶನ್ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಖಾಸಿಂಸಾಬ ಇವರು ತೀರಿಕೊಂಡ ನಂತರ ಆ ಆಸ್ತಿಯನ್ನು ಪುನ: ನಿಮ್ಮ ತಾಯಿ ಸಾಬೀರಾಬೇಗಂ ಇವರು ತಮ್ಮ ಹೆಸರಿಗೆ ಮುಟೇಶನ್ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಖಾಸಿಂಸಾಬ ಇವರು ಜೀವಂತ ಇರುವ ಕಾಲಕ್ಕೆ 2004ನೇ ಇಸ್ವಿಯಲ್ಲಿ ನಿಮ್ಮ ತಾಯಿ ಸಾಬೀರಾಬೇಗಂ ಇವರಿಗೆ ಮೌಖಿಕ ದಾನವನ್ನು ಮಾಡಿಕೊಟ್ಟಿರುತ್ತಾರೆ ಆ ಪ್ರಕಾರ ಮುಟೇಶನ್ ನಂಬರ್ 40/2006-07 ದಿನಾಂಕ: 16-04-2007 ರಂದು ಅವರ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಮೌಖಿಕ ದಾನವನ್ನು ನಿಮ್ಮ ತಾಯಿ

ಸಂತೋಷಪೂರ್ವಕವಾಗಿ ಸ್ವೀಕರಿಸಿ ಅವರೇ ಸ್ವಾಧಿನದಾರರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ. ನಂತರ ನಿಮ್ಮ ತಾಯಿ ದಕ್ಷಿಣ ಭಾಗದ ಮನೆಯನ್ನು ನಿಮ್ಮ ಅಣ್ಣ 2ನೇ ಪ್ರತಿವಾದಿಯ ಹೆಸರಿಗೆ ನೋಂದಾಯಿತ ದಾನಪತ್ರ ನಂಬರ್ 5063/2021-22, ದಿನಾಂಕ: 04-03-2022 ರಂದು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾನ ಪತ್ರದ ಆಧಾರದ ಮೇರೆಗೆ ದಿನಾಂಕ: 25-04-2022 ರಂದು 2ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

3. ದಾವಾ ಜಮೀನು ಸರ್ವೆ ನಂಬರ್ 63/*/2 ರ ಜಮೀನನ್ನು ನಿಮ್ಮ ತಂದೆ ಖಾಸಿಂಸಾಬ ರವರು ಖರೀದಿ ಪತ್ರ ಸಂಖ್ಯೆ 1720/2002-03 ದಿನಾಂಕ: 09-01-2003 ರಂತೆ ಖರೀದಿ ಮಾಡಿ 2004 ನೇ ಸಾಲಿನಲ್ಲಿ 1ನೇ ಪ್ರತಿವಾದಿ ಇವರಿಗೆ ಇಬ್ಬರು ಸಾಕ್ಷಿದಾರರಾದ ಜಹಿರುದ್ದೀನ್ ತಂದೆ ಖಾಸಿಂಸಾಬ ಮತ್ತು ಹಲೀಂಪಾಶಾ ತಂದೆ ಶೇಖ್ ಹುಸೇನಸಾಬ ಇವರ ಸಮ್ಮುಖದಲ್ಲಿ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಮೌಖಿಕ ದಾನ ಪತ್ರದ ಆಧಾರದ ಮೇರೆಗೆ ಮುಟೇಶನ್ ನಂಬರ್ 40/2006-07 ದಿನಾಂಕ: 16-04-2007 ರಂತೆ 1ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ. ಮೇಲೆ ಹೇಳಿದ ಎಲ್ಲಾ ವಿಷಯಗಳು ನಿಮಗೆ ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ದಾವಾ ಸರ್ವೆ ನಂಬರ್ 63/*/2, ವಿಸ್ತೀರ್ಣ 02 ಎಕರೆ 14 ಗುಂಟೆ ಜಮೀನನ್ನು ನಿಮ್ಮ ತಾಯಿ ನಿಮ್ಮ ತಂಗಿ ಫರ್ಜಾನಾ ಬೇಗಂ ಇವರ ಹೆಸರಿಗೆ ನೋಂದಾಯಿತಿ ದಾನಪತ್ರ ನಂಬರ್ 924/2022-2023 ದಿನಾಂಕ: 24-05-2022 ರಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾನ ಪತ್ರದ ಆಧಾರದ ಮೇರೆಗೆ ಫರ್ಜಾನಾ ಬೇಗಂ ಇವರ ಹೆಸರಿಗೆ ಮುಟೇಶನ್ ನಂಬರ್ ಹೆಚ್ 24 ದಿನಾಂಕ: 28-06-2022 ರಂದು ಮುಟೇಸನ್ ಆಗಿ ಅವರೆ ಸದರಿ ಆಸ್ತಿಯ ಮಾಲೀಕರು ಕಬ್ಜಾದಾರರು ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಆಸ್ತಿಗಳು ನಿಮ್ಮ ತಂದೆ ಸ್ವಂತ ಖರೀದಿ ಮಾಡಿದ ಆಸ್ತಿಗಳು

ಆಗಿರುತ್ತವೆ ಎಂದರೆ ಸರಿ. ನಿಮ್ಮ ತಂದೆ ಜೀವಂತ ಇರುವಾಗಲೇ ದಾವಾ ಆಸ್ತಿಗಳನ್ನು ದಾನ ಮಾಡಿಕೊಟ್ಟಿರುವುದರಿಂದ ಸದರಿ ಆಸ್ತಿಗಳಲ್ಲಿ ನಿಮಗಾಗಲಿ ಮತ್ತು ಪ್ರತಿವಾದಿ ನಂಬರ್ 4 ಇವರಿಗೆ ಪಾಲುವಿಭಾಗ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಿಮಗೆ ಪಾಲು ವಿಭಾಗ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ವಾದ ಪತ್ರದ ಪ್ಯಾರಾ ನಂಬರ್ 2 ರಲ್ಲಿ ನಮೂದು ಮಾಡಿರುವ ಸಾರಾಂಶ ಸುಳ್ಳು ಸೃಷ್ಟಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ